**ಶ್ರೀ ಗಣಪತಿ ದುಮ್ಮಾ ಉಳ್ವೇಕರ್, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಉತ್ತರ**

---

## ಸೂಚನೆ:-

ಮೀನುಗಾರಿಕೆ ವೇಳೆ ಮೃತಪಟ್ಟ ಮೀನುಗಾರರ ಕುಟುಂಬಕ್ಕೆ ಪರಿಹಾರ ನೀಡದಿಲ್ಲದಿರುವುದು ಹಾಗೂ ಮೀನುಗಾರರ ಮಹಿಳೆಯರ ಸಬಲೀಕರಣಕ್ಕೆ ಯೋಜನೆ ರೂಪಿಸುವ ಕುರಿತು.

## ಹೇಳಿಕೆ:-

ಕರಾವಳಿ ಪ್ರದೇಶದಲ್ಲಿ ಚಂಡಮಾರುತದ ವೇಳೆ ಹಾಗು ಮೀನುಗಾರಿಕೆ ನಡೆಸುವ ಸಂದರ್ಭದಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಮೀನು ಕೃಷಿಯನ್ನೇ ಬದುಕನ್ನಾಗಿಸಿ ಕೊಂಡಿರುವ ಮೀನುಗಾರರು ಆಳಸಮುದ್ರದಲ್ಲಿ ಆಕಸ್ಮಿಕವಾಗಿ ಸಾವನ್ನಪ್ಪಿದಾಗ ಅಥವಾ ಇನ್ನಿತರೆ ಅವಘಡಗಳಿಂದಾಗಿ ಕಂಟಕಗಳಿಗೆ ಈಡಾದಾಗ ಅಂತಹ ಮೀನುಗಾರರು ಮತ್ತು ಅವರ ಅವಲಂಬಿತ ಕುಟುಂಬಸ್ಥರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುವ ಪರಿಹಾರಗಳು:-

ಮೀನುಗಾರಿಕೆಯಲ್ಲಿ ತೊಡಗಿರುವಾಗ ನೀರಿನಲ್ಲಿ ಮುಳುಗಿ ಮರಣ ಹೊಂದಿದ ಪ್ರಕರಣಗಳಿಗೆ ರೂ.6.00 ಲಕ್ಷ ಪರಿಹಾರ ನೀಡಲಾಗುವುದು. ಮೀನುಗಾರಿಕೆಯಲ್ಲಿ ತೊಡಗಿರುವಾಗ ಹೊರತುಪಡಿಸಿ ಧಕ್ಕೆಯಲ್ಲಿ / ಬಂದರಿನ ಒಳಗೆ / ಅಧಿಕೃತ ಇಳಿದಾಣ ಕೇಂದ್ರಗಳಲ್ಲಿ / ನದಿ ದಡದಲ್ಲಿ ಮರಣ ಹೊಂದಿದ ಪ್ರಕರಣಗಳಿಗೆ ಹಾಗೂ ಮೀನುಗಾರಿಕೆಯಲ್ಲಿ ತೊಡಗಿದಾಗ ಅನಾರೋಗ್ಯದಿಂದ ಮೃತಪಟ್ಟ ಪ್ರಕರಣಗಳಿಗೆ ರೂ.3.00 ಲಕ್ಷ ಪರಿಹಾರ ನೀಡಲಾಗುವುದು. ಮೃತರು ಅವಿವಾಹಿತರಾಗಿದ್ದಲ್ಲಿ ಪರಿಹಾರ ಮೊತ್ತವನ್ನು ಪೋಷಕರಿಗೆ ಹಾಗೂ ಮೃತರು ವಿವಾಹಿತರಾಗಿದ್ದಲ್ಲಿ ಪರಿಹಾರ ಮೊತ್ತವನ್ನು ಮೃತರ ಪತ್ನಿಗೆ ಶೇ.50ರಷ್ಟು ಹಾಗೂ ಮೃತರ ಮಕ್ಕಳು ಹಾಗೂ ಪೋಷಕರಿಗೆ ಬಾಕಿ ಶೇ.50ರಷ್ಟು ಸಮಾನವಾಗಿ ನೀಡಲಾಗುವುದು. ಮೃತರ ಮಕ್ಕಳು ಅಪ್ರಾಪ್ತರಾಗಿದ್ದಲ್ಲಿ ಪರಿಹಾರ ಮೊತ್ತವನ್ನು ಮೃತರ ಪತ್ನಿಗೆ ನೀಡಲಾಗುವುದು.

ಪ್ರಾಕೃತಿಕ ವಿಕೋಪದಿಂದಾದ ನಾಡದೋಣಿ / ಮೋಟರೀಕೃತ ದೋಣಿಗಳ ಹಾನಿಗೆ ಹಾಗೂ ಬಲೆ ಇನ್ನಿತರ ಸ್ವತ್ತು ಹಾನಿಗೆ ಸವಕಳಿ ಕಳೆದು ಗರಿಷ್ಟ ರೂ.1.00 ಲಕ್ಷ ಅಥವಾ ಖರೀದಿ ಮೌಲ್ಯದ / ದುರಸ್ತಿಯ ಶೇ.50ರಷ್ಟು ಮೌಲ್ಯವನ್ನು ಪರಿಹಾರವಾಗಿ ನೀಡಲಾಗುವುದು.

ಮೀನುಗಾರಿಕೆಯಲ್ಲಿ ಅಥವಾ ಮೀನುಗಾರಿಕೆ ಚಟುವಟಿಕೆಯಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ ವೈದ್ಯಕೀಯ ಶುಶ್ರೂಷೆಗಾಗಿ ಮಾಡಿದ ವೆಚ್ಚದ ಶೇ.50ರಷ್ಟು ಅಥವಾ ಗರಿಷ್ಟ ರೂ.1.00 ಲಕ್ಷಗಳ ಮಿತಿಗೊಳಪಟ್ಟು ಪರಿಹಾರ ನೀಡಲಾಗುವುದು.

ಮೇಲಿನ ಪ್ರಕರಣಗಳಲ್ಲಿ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ನಿಯಮಾನುಸಾರ ಪರಿಹಾರ ವಿತರಿಸಿ, ಸಂಕಷ್ಟ ಪರಿಹಾರ ನಿಧಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗುತ್ತದೆ.

2020-21ನೇ ಸಾಲಿನಲ್ಲಿ ಮರಣ ಪ್ರಕರಣ, ದೋಣಿ / ಬಲೆ ಹಾನಿ ಹಾಗೂ ವೈದ್ಯಕೀಯ ವೆಚ್ಚ ಪ್ರಕರಣಗಳಲ್ಲಿ ಪರಿಹಾರದ ಮೊತ್ತ ಈ ಕೆಳಕಂಡಂತಿದೆ:-

| ಕ್ರ. ಸಂ. | ಪ್ರಕರಣಗಳ ವಿವರ | ಪ್ರಕರಣಗಳ ಸಂಖ್ಯೆ | ಪರಿಹಾರ ನೀಡಲಾದ ಒಟ್ಟು ಮೊತ್ತ **(ರೂ.ಲಕ್ಷಗಳಲ್ಲಿ)** |
|---|---|---|---|
| 1 | ಮರಣ ಪ್ರಕರಣ | 54 | 301.00 |
| 2 | ದೋಣಿ / ಬಲೆ ಹಾನಿ | 28 | 19.18 |
| 3 | ವೈದ್ಯಕೀಯ ವೆಚ್ಚ | 01 | 2.00 |
| ಒಟ್ಟು | | **83** | **322.18** |

ಮುಂದುವರೆದು, ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯ ಉಪಯೋಜನೆಯಾದ ಜನತಾ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿ ಮೃತ ಮೀನುಗಾರರಿಗೆ ಹೆಚ್ಚುವರಿಯಾಗಿ ರೂ.5.00 ಲಕ್ಷ ಪರಿಹಾರ ಲಭ್ಯವಾಗುವುದು. ಹಾಗೂ ಶಾಶ್ವತ ಅಂಗವಿಕಲರಾದವರಿಗೆ ರೂ.2.50 ಲಕ್ಷಗಳ ಪರಿಹಾರ ಲಭ್ಯವಾಗುವುದು.

ಮೀನುಗಾರ ಮಹಿಳೆಯರ ಸಬಲೀಕರಣ ಹಾಗು ಅವರ ಆರ್ಥಿಕ ಸ್ಥಿತಿಗತಿಗಳನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯಲು ಅನುಕೂಲವಾಗುವಂತೆ ಸೂಕ್ತ ಯೋಜನೆಗಳನ್ನು ಇಲಾಖೆ ಈಗಾಗಲೇ ಅನುಷ್ಠಾನಗೊಳಿಸುತ್ತಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ,

- ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು ಯೋಜನೆಯಡಿ, ಬ್ಯಾಂಕ್ ಗಳಿಂದ ಮೀನುಗಾರರಿಗೆ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ರೂ.50,000/- ಮೊತ್ತದ ಸಾಲಕ್ಕೆ ಬ್ಯಾಂಕ್ ಗಳು ವಿಧಿಸುವ ಬಡ್ಡಿಯನ್ನು ಇಲಾಖೆಯಿಂದ ಮರುಪಾವತಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಡಿ ಒಬ್ಬ ಫಲಾನುಭವಿಯು ರೂ.50,000/- ಮೊತ್ತ ಸಾಲವನ್ನು ಬ್ಯಾಂಕ್ ಯಿಂದ ಪಡೆಯಬಹುದಾಗಿದೆ. ಈ ಯೋಜನೆಯಡಿ ಮಹಿಳಾ ಪಲಾನುಭವಿ ಗಳಿಗೆ ವಿಷೇಷವಾಗಿ ಶೂನ್ಯ ಬಡ್ಡಿದರದಲ್ಲಿ ಮೀನುಗಾರಿಕೆ ಚಟುವಟಿಕೆಗಳಿಗಾಗಿ ರೂ.50,000/- ದವರೆಗೆ ಸಾಲವನ್ನು ಪಡೆಯಬಹುದಾಗಿದೆ.

2017-18 ಮತ್ತು 2018-19ನೇ ಸಾಲಿನಲ್ಲಿ ಶೇ.2ರ ಬಡ್ಡಿದರದಲ್ಲಿ ಮೀನುಗಾರಿಕೆ ಚಟುವಟಿಕೆಗಳಿಗೆ ಸಾಲ ಪಡೆದ 20,066 ಮೀನುಗಾರರ ಹೊರ ಬಾಕಿ ಸಾಲ ರೂ.49.00 ಕೋಟಿ ಮನ್ನಾ ಮಾಡಲಾಗಿದೆ.

ಇದಲ್ಲದೆ, ಈ ಕೆಳಕಂಡ ಯೋಜನೆಗಳಡಿ, ಯೋಜನೆಯ ಒಟ್ಟು ಅನುದಾನದ **ಶೇ.30 ಕ್ಕಿಂತ ಹೆಚ್ಚು ಅನುದಾನವನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿದ್ದು,** ಈ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.

- ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ ಯೋಜನೆಯಡಿ ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ

- ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ 'ಮೀನು ಉತ್ಪಾದನೆ ಮತ್ತು ಮೀನು ಉತ್ಪಾದಕತೆಯನ್ನು' ಹೆಚ್ಚಿಸುವುದು, ಮೀನುಗಾರಿಕೆಯ ಮೂಲಭೂತ ಸೌಕರ್ಯ ಮತ್ತು ಮೀನು ಹಿಡುವಳಿ ಹೆಚ್ಚಿಸಲು ಪ್ರೋತ್ಸಾಹಿಸುವುದು ಮತ್ತು ಸಮುದ್ರ ಮೀನುಗಾರಿಕೆ ಬೋಟುಗಳಲ್ಲಿ ಮಾನಿಟರಿಂಗ್, ಸರ್ವೆಯಲೆನ್ಸ್ ಮತ್ತು ಕಂಟ್ರೋಲ್ ಸಲುವಾಗಿ ಅಗತ್ಯ ಉಪಕರಣಗಳ ಅಳವಡಿಕೆಗೆ ಸಹಾಯಧನ ನೀಡಲಾಗುತ್ತಿದೆ.

- ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ ಯೋಜನೆಯಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀನುಗಾರರಿಗೆ ಮೀನುಗಾರಿಕೆ ಕಸುಬು ಮಾಡಲು ಪ್ರೋತ್ಸಾಹಿಸಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀನುಗಾರರಿಗೆ ಮೀನು ಸಾಗಾಟ ಮಾಡಲು ನಾಲ್ಕು ಚಕ್ರ ವಾಹನ ಖರೀದಿಗೆ ಸಹಾಯಧನ ನಿಡಲಾಗುತ್ತಿದೆ.

- ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು ಯೋಜನೆಯಡಿ, ಸಾಂಪ್ರದಾಯಿಕ ಮೀನುಗಾರಿಕೆಯಲ್ಲಿ (ಸಮುದ್ರ ಮೀನುಗಾರಿಕೆ) ತೊಡಗಿರುವ ದೋಣಿ ಮಾಲೀಕರಿಗೆ ಪಡಿತರ ದರದಲ್ಲಿ ಪ್ರತಿ ಮಾಹೆ 300 ಲೀಟರ್ ಸೀಮೆಎಣ್ಣೆ ವಿತರಿಸಲಾಗುತ್ತಿದೆ.

- ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ - ಮಾರಾಟ ತೆರಿಗೆ ಮರುಪಾವತಿ ಯೋಜನೆಯಡಿ, ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ಡೀಸಲ್ ಅನ್ನು ರಾಜ್ಯ ಮಾರಾಟ ತೆರಿಗೆ ರಹಿತ ದರದಲ್ಲಿ ಡೀಸಲ್ ಡೆಲಿವರಿ ಪಾಯಿಂಟ್ ನಲ್ಲಿಯೇ ಡೀಸಲ್ ವಿತರಿಸಲಾಗುತ್ತಿದೆ.

- ಮೀನುಗಾರಿಕೆ ಸಲಕರಣೆ ಕಿಟ್‌ಗಳ ಸರಬರಾಜು ಯೋಜನೆಯಡಿ, ಮೀನು ಹಿಡುವಳಿಗೆ ಬೇಕಾದ ಬಲೆ ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ ರೂಪದಲ್ಲಿ ಫಲಾನುಭವಿಗಳಿಗೆ ಉಚಿತವಾಗಿ ನೀಡಲಾಗುತ್ತಿದೆ. ಈ ಯೋಜನೆಯಡಿ ಒಬ್ಬ ಫಲಾನುಭವಿಗೆ ರೂ.10,000/- ಮೌಲ್ಯದ ಮೀನುಗಾರಿಕೆ ಬಲೆ ಕಿಟ್ ಅನ್ನು ಉಚಿತವಾಗಿ ನೀಡಲಾಗುತ್ತಿದೆ.

- ಮೀನುಗಾರರ ಕಲ್ಯಾಣ ಯೋಜನೆಗಳು - ಈ ಯೋಜನೆಯಡಿ ಮೀನುಗಾರಿಕೆ ಇಲ್ಲದ ಅವಧಿಯಲ್ಲಿ ಕರಾವಳಿ ಮೀನುಗಾರರಿಗೆ ಜೀವನಾಧಾರಕ್ಕೆ ಸಹಾಯಧನ ನೀಡಲಾಗುತ್ತಿದೆ.

---

ಸಂಖ್ಯೆ: ಪಸಂಮೀ ಇ-79 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು